ದಿನಾಂಕ 16.10.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಎಸ್.ಎಸ್.ಬಿ. ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿಗೆ ದಾವಾಸ್ತಿಯು ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಪ್ರತಿವಾದಿ ಮತ್ತು ಅವರ ಗಂಡ ನಂಜೇಗೌಡ ರವರಿಗೆ 03 ಜನ ಹೆಣ್ಣು ಮಕ್ಕಳಿರುತ್ತಾರೆ. ವಿವಾದಿತ ಕ್ರಯದ ಕರಾರನ್ನು ಬರೆದುಕೊಡಲು ಪ್ರತಿವಾದಿಯವರು ಯಾವೆಲ್ಲ ದಾಖಲೆಗಳನ್ನು ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-6ರ ಕರಾರನ್ನು ಬರೆದುಕೊಡುವ ಸಂದರ್ಭದಲ್ಲಿ ಪ್ರತಿವಾದಿಯವರ ಗಂಡನವರು ಬದುಕಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರ ಗಂಡ ನಂಜೇಗೌಡರವರ ದಿಃ25.05.2003 ರಂದು ಮರಣ ಹೊಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯು ನಂಜೇಗೌಡರ ಆಸ್ತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಹೆಸರಿಗೆ ದಿಃ30.04.2019ರಂದು ಎಂ.ಆರ್.ಹೆಚ್ 52/2018-19ರಂತೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ-6 ರ ಕ್ರಯದ ಕರಾರನ್ನು ಪ್ರತಿವಾದಿಯ ಗಂಡ ನಂಜೇಗೌಡರವರು ಬರೆದುಕೊಟ್ಟಿರುವುದಿಲ್ಲ. ನಿಪಿ-6 ರ ಕ್ರಯದ ಕರಾರನ್ನು ಬರೆದುಕೊಡುವ ಸಂದರ್ಭದಲ್ಲಿ ಪ್ರತಿವಾದಿಗೆ ದಾವಾಸ್ವತ್ತಿನ ಮೇಲೆ ಯಾವುದೇ ಹಕ್ಕುಬಾಧ್ಯತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ-6 ರ ಕ್ರಯದಕರಾರನ್ನು ಬರೆದುಕೊಟ್ಟ 03 ವರ್ಷದ ಒಳಗಡೆ ದಾವೆ ಸಲ್ಲಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ತುಂಡುಭೂಮಿ ಕಾಯ್ದೆ ಯಾವಾಗ ಮತ್ತು ಎಷ್ಟು ಬಾರಿ ತಿದ್ದುಪಡಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸಲ್ಲಿಸುವ ಸಂದರ್ಭದಲ್ಲಿ ತುಂಡು ಭೂಮಿ ಕಾಯ್ದೆಗೆ ಯಾವ ತಿದ್ದುಪಡಿ ಆಗಿರುತ್ತದೆ ಎಂದು ನಮ್ಮ ದಾವಾಪತ್ರದಲ್ಲಿ ತಿಳಿಸಿರುವುದಿಲ್ಲ.

ನಿಪಿ-6 ರ ಕ್ರಯದ ಕರಾರಿನ ಕಾಗದವನ್ನು ನಮ್ಮ ತಂದೆ ಚಿಕ್ಕಣ್ಣೇಗೌಡರ ಹೆಸರಿನಲ್ಲಿ ತಂದಿರುತ್ತೇವೆ. ನಿಪಿ-6 ರ ಕ್ರಯದ ಕರಾರನ್ನು ಬರೆಯುವ ಸಂದರ್ಭದಲ್ಲಿ ಪ್ರತಿವಾದಿಯ ಗಂಡ ನಂಜೇಗೌಡರವರು

ಬದುಕಿದ್ದರು ಅವರು ಪೌತಿಯಾಗಿರತ್ತಾರೆಂದು ತಪ್ಪಾಗಿ ನಮೂದಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಯಾವುದೇ ಕ್ರಯದ ಕರಾರನ್ನು ಬರೆದುಕೊಡದೇ ಇದ್ದರು ನಮ್ಮ ತಂದೆ ಹಾಗೂ ಕೆಲವು ಸಾಕ್ಷಿಗಳು ಸೇರಿಕೊಂಡು ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ-6 ನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ